6

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]

Total No. of Questions : 57 ]

**ಸಂಕೇತ ಸಂಖ್ಯೆ : 95-K**

**Code No. : 95-K**

**C**

**CCE PR**
**UNREVISED**
**FULL SYLLABUS**
**NSR & NSPR**

**Question Paper Serial No. 712**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 17. 06. 2023 ] [ Date : 17. 06. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಇವುಗಳಲ್ಲಿ ದೀರ್ಘಾವಧಿ ಸಾಮಾಜಿಕ ಪರಿವರ್ತನೆಯು

   (A) ಉಡುಪಿನಲ್ಲಿ ಬದಲಾವಣೆ

   (B) ಭಾಷೆಯಲ್ಲಿ ಬದಲಾವಣೆ

   (C) ಆಹಾರ ಪದ್ಧತಿಯಲ್ಲಿ ಬದಲಾವಣೆ

   (D) ರಾಜಕೀಯ ಸಿದ್ಧಾಂತಗಳಲ್ಲಿ ಬದಲಾವಣೆ

2. ಜಿ.ಎಸ್. ಗುರ್‍ರೆರವರು ಬರೆದ ಪುಸ್ತಕ

   (A) ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ

   (B) ದಿ ಬೈಗಾ

   (C) ದಿ ಅಬೊರಿಜಿನಲ್ಸ್

   (D) ನ್ಯೂ ಇಂಡಿಯಾ

3. ಬಾರ್ಡೋಲಿ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರು

(A) ಮಹಾತ್ಮಾ ಗಾಂಧಿ

(B) ಡಾ. ಬಿ.ಆರ್. ಅಂಬೇಡ್ಕರ್

(C) ಸರ್ದಾರ್ ವಲ್ಲಭಭಾಯಿ ಪಟೇಲ್

(D) ಲಾಲಾಲಜಪತ್ ರಾಯ್

4. ಪ್ರಾರಂಭದಲ್ಲಿ 'ಪರಮಹಂಸ ಸಭಾ' ಎಂದು ಕರೆಯಲ್ಪಡುತ್ತಿದ್ದ ಸಂಸ್ಥೆಯು

(A) ಆರ್ಯ ಸಮಾಜ

(B) ಪ್ರಾರ್ಥನಾ ಸಮಾಜ

(C) ಬ್ರಹ್ಮ ಸಮಾಜ

(D) ಸತ್ಯಶೋಧಕ ಸಮಾಜ

5. ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಿದವರು

(A) ದಯಾನಂದ ಸರಸ್ವತಿ

(B) ಈಶ್ವರ್ ಚಂದ್ರ ವಿದ್ಯಾಸಾಗರ್

(C) ರಾಜಾ ರಾಮ್‌ಮೋಹನ್ ರಾಯ್

(D) ಮಹರ್ಷಿ ಕರ್ವೆ

6. ಭಾರತದ ಮೊದಲ ಶಿಕ್ಷಕಿ

(A) ಆ್ಯನಿ ಬೆಸೆಂಟ್

(B) ಸಾವಿತ್ರಿಬಾಯಿ ಫುಲೆ

(C) ಸರೋಜಿನಿ ನಾಯ್ಡು

(D) ಸಹೋದರಿ ನಿವೇದಿತ

7. ರಾಜಾ ರಾಮ್‌ಮೋಹನ್ ರಾಯರು ಪ್ರಾರಂಭಿಸಿದ ಸಮಾಜ ಸುಧಾರಣಾ ಸಂಸ್ಥೆ

(A) ಸತ್ಯಶೋಧಕ ಸಮಾಜ

(B) ಆರ್ಯ ಸಮಾಜ

(C) ಬ್ರಹ್ಮ ಸಮಾಜ

(D) ಪ್ರಾರ್ಥನಾ ಸಮಾಜ

8. 'ಭಾರತೀಯ ರಾಷ್ಟ್ರೀಯ ಸೈನ್ಯದ ಮಹಿಳಾ ಘಟಕ'ವನ್ನು ಸಂಘಟಿಸಿದವರು

(A) ಕರ್ನಲ್ ಲಕ್ಷ್ಮೀ

(B) ಆ್ಯನಿ ಬೆಸೆಂಟ್

(C) ವಿಜಯ್‌ಲಕ್ಷ್ಮೀ ಪಂಡಿತ್

(D) ಮಣಿಬೆನ್ ಪಟೇಲ್

9. ಭಾರತದಲ್ಲಿ ಮೊಟ್ಟಮೊದಲ ಬುಡಕಟ್ಟು ಆಯೋಗದ ಆಧ್ಯಕ್ಷರು

(A) ಯು.ಎನ್. ದಾಬರ್

(B) ದಿಲೀಪ್ ಸಿಂಗ್ ಬೂರಿ

(C) ಡಾ. ಬಿ.ಆರ್. ಅಂಬೇಡ್ಕರ್

(D) ಡಾ. ಬಾಬು ರಾಜೇಂದ್ರ ಪ್ರಸಾದ್

10. ಭಾರತದ ಈಶಾನ್ಯ ರಾಜ್ಯಗಳಲ್ಲಿ ಕಂಡುಬರುವ ಬುಡಕಟ್ಟು

(A) ನಾಗಾಗಳು

(B) ಸೋಲಿಗರು

(C) ಹಕ್ಕಿ-ಪಿಕ್ಕಿಗಳು

(D) ಸಂತಾಲರು

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಮಹಾವೀರ | (i) ಇಸ್ಲಾಂ ಧರ್ಮ |
| (B) ಗುರುನಾನಕ್ | (ii) ವಚನಕಾರ |
| (C) ಗೌತಮ ಬುದ್ಧ | (iii) ಜೈನ ಧರ್ಮ |
| (D) ಜ್ಯೋತಿಬಾ ಫುಲೆ | (iv) ಸಿಖ್ ಧರ್ಮ |
| (E) ಬಸವಣ್ಣ | (v) ಬೌದ್ಧ ಧರ್ಮ |
| | (vi) ಸತ್ಯಶೋಧಕ ಸಮಾಜ |
| | (vii) ಕ್ರೈಸ್ತ ಧರ್ಮ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಸಾಮಾಜಿಕ ಬದಲಾವಣೆ ಎಂದರೇನು ?

13. ವಲಸೆಯ ಹೆಚ್ಚಳಕ್ಕೆ ಕಾರಣವೇನು ?

14. ಚಂಪಾರಣ್ಯ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರು ಯಾರು ?

15. ಆರ್ಯ ಸಮಾಜದ ಸ್ಥಾಪಕರನ್ನು ಹೆಸರಿಸಿ.

16. ಪ್ರಾರ್ಥನಾ ಸಮಾಜವು ಹಿಂದೂ ಧರ್ಮದಲ್ಲಿ ವಿಶಿಷ್ಟ ಸ್ಥಾನ ಪಡೆಯಲು ಕಾರಣವೇನು ?

17. ಸಾಮಾಜಿಕ ಚಳವಳಿಗಳ ಮುಖ್ಯ ಉದ್ದೇಶವೇನು ?

18. ಶ್ರೀರಾಮಕೃಷ್ಣ ಮಿಷನ್ ಅನ್ನು ಯಾರು ಸ್ಥಾಪಿಸಿದರು ?

19. ಹಿಂದೂ ಉತ್ತರಾಧಿಕಾರ ಕಾಯ್ದೆಯ ಮಹತ್ವವೇನು ?

20. ಗಿಡಮೂಲಿಕೆ ಔಷಧಿಗಳ ತಯಾರಿಕೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದವರು ಯಾರು ?

21. ಬ್ಲಾಕ್ ಪದ್ಧತಿಯನ್ನು ಏಕೆ ಅನುಷ್ಠಾನಕ್ಕೆ ತರಲಾಯಿತು ?

22. ಬುಡಕಟ್ಟು ಸಲಹಾ ಸಮಿತಿಯ ಕಾರ್ಯವೇನು ?

23. ವಯಸ್ಕರ ಶಿಕ್ಷಣ ಕಾರ್ಯಕ್ರಮದ ಮುಖ್ಯ ಉದ್ದೇಶವೇನು ?

24. ಕಂಪ್ಯೂಟರ್ ಅನಕ್ಷರಸ್ಥರು ಎಂದರೆ ಯಾರು ?

25. ಮೂಕನಾಯಕ ಪತ್ರಿಕೆಯನ್ನು ಯಾರು ಪ್ರಕಟಿಸಿದರು ?

26. ಪ್ರಾದೇಶಿಕ ಅಸಮತೋಲನ ಎಂದರೇನು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಸಾಮಾಜಿಕ ಬದಲಾವಣೆಯ ಪ್ರಕಾರಗಳಾವುವು ?

28. ಕೈಗಾರಿಕೀಕರಣದ ಪರಿಣಾಮಗಳಾವುವು ?

29. ಸ್ತ್ರೀಯರ ಸ್ಥಾನಮಾನ ಸುಧಾರಣೆಯಲ್ಲಿ ಶಿಕ್ಷಣದ ಪಾತ್ರವೇನು ?

30. ಆರ್ಥಿಕ ಅಸಮತೋಲನವನ್ನು ಕಡಿಮೆ ಮಾಡಲು ಭಾರತವು 1950 ರಲ್ಲಿ ಅನುಸರಿಸಿದ ನೀತಿಗಳಾವುವು ?

31. ಆರ್ಥಿಕ ಸಂಕಷ್ಟದಲ್ಲಿರುವವರು ಸಾಮಾಜಿಕ ಬದಲಾವಣೆಯನ್ನು ಏಕೆ ವಿರೋಧಿಸುತ್ತಾರೆ ?

32. ಜಾತಿ ಪದ್ಧತಿಯಲ್ಲಿ ಉಂಟಾದ ಪರಿವರ್ತನೆಗೆ ಕಾರಣಗಳೇನು ?

33. ಫ್ರೆಂಚ್ ಮಹಾಕ್ರಾಂತಿಯ ಧ್ಯೇಯಗಳಾವುವು ?

34. ಪ್ರಾರ್ಥನಾ ಸಮಾಜದ ಮೇಲೆ ಪ್ರಭಾವ ಬೀರಿದ ಸಂತರನ್ನು ಹೆಸರಿಸಿ.

35. ಹಂಟರ್ ಆಯೋಗವು ಮಹಿಳಾ ಶಿಕ್ಷಣಕ್ಕೆ ನೀಡಿದ ಪ್ರಾಮುಖ್ಯತೆಯನ್ನು ವಿವರಿಸಿ.

36. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನಕ್ಕೆ ವಿಶೇಷ ಆಸಕ್ತಿ ತೋರಿದ ಸಂಸ್ಥೆಗಳಾವುವು ?

37. ಬುಡಕಟ್ಟು ಸಂಸ್ಕೃತಿಯನ್ನು ರಕ್ಷಿಸುವುದು ಅಗತ್ಯವಾಗಿದೆ. ಏಕೆ ?

38. ಸಮೂಹ ಮಾಧ್ಯಮದ ಪ್ರಕಾರಗಳಾವುವು ?

39. ಅಂತರ್ಜಾಲ (ಇಂಟರ್ನೆಟ್) ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಹೇಗೆ ?

40. ರಾಜಾ ರಾಮ್‌ಮೋಹನ್ ರಾಯರನ್ನು "ಭಾರತದ ನವೋದಯದ ಪಿತಾಮಹ" ಎಂದು ಕರೆಯಲಾಗಿದೆ. ಏಕೆ ?

41. ಆಧುನಿಕ ಶಿಕ್ಷಣ ಒಂದು ಔದ್ಯೋಗಿಕ ಸಾಧನೆಯಾಗಿದೆ. ಹೇಗೆ ?

42. ನಗರ ಹಾಗೂ ಗ್ರಾಮೀಣ ಪ್ರದೇಶಗಳ ಅಸಮಾನತೆಗೆ ಪ್ರಮುಖ ಕಾರಣಗಳೇನು ?

43. ಬ್ರಿಟಿಷರ ಕಾಲದಲ್ಲಿ ಜಾತಿಯ ನಿರ್ಮೂಲನೆಗೆ ಜಾರಿಗೆ ತಂದ ಕಾಯ್ದೆಗಳನ್ನು ತಿಳಿಸಿ.

44. ಜಾತಿಯ ನಿರ್ಮೂಲನೆಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳೇನು ?

45. ಕ್ರಾಂತಿಕಾರಕ ಚಳವಳಿಗಳ ಪರಿಣಾಮಗಳೇನು ?

46. ಮಹಿಳಾ ಸಬಲೀಕರಣವನ್ನು ಅರ್ಥೈಸಿ.

47. ಬ್ರಿಟಿಷರ ಕಾಲದಲ್ಲಿ ಮಹಿಳಾ ಶಿಕ್ಷಣಕ್ಕೆ ಕೈಗೊಂಡ ಕ್ರಮಗಳನ್ನು ತಿಳಿಸಿ.

48. ಭಾರತದ ಆದಿವಾಸಿ ಮಹಿಳೆಯರ ಪ್ರಮುಖ ಸಮಸ್ಯೆಗಳಾವುವು ?

49. 1980 ರಲ್ಲಿ ಜಾರಿಗೆ ಬಂದ ಬುಡಕಟ್ಟು ಯೋಜನೆಯ ಅಂಶಗಳು ಯಾವುವು ?

50. ವೃತ್ತಪತ್ರಿಕೆಗಳ ಪ್ರಕಾರಗಳಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**
**6 × 3 = 18**

51. ಸಾಮಾಜಿಕ ಬದಲಾವಣೆಗಿರುವ ಅಡ್ಡಿ ಆತಂಕಗಳೇನು ?

52. ಸ್ವತಂತ್ರ ಭಾರತದಲ್ಲಿ ಜ್ಯಾತಿ ವ್ಯವಸ್ಥೆಯಲ್ಲಾದ ಬದಲಾವಣೆಗಳಾವುವು ?

53. ಸಮಾಜ ಸುಧಾರಣೆಯಲ್ಲಿ ಕಬೀರ್ ಪಂಥದ ಪ್ರಮುಖ ಅಂಶಗಳನ್ನು ತಿಳಿಸಿ.

54. ಮಹಿಳೆಯರ ಸಮಾನತೆಗಾಗಿ ಹೋರಾಡಿದ ಭಾರತೀಯ ಸಮಾಜ ಸುಧಾರಕರನ್ನು ಹೆಸರಿಸಿ.

55. ಭಾರತದಲ್ಲಿ ಬುಡಕಟ್ಟುಗಳ ಅವನತಿಗೆ ಕಾರಣಗಳನ್ನು ವಿವರಿಸಿ.

56. ಒಂದು ಸಮೂಹ ಮಾಧ್ಯಮವಾಗಿ ರೇಡಿಯೋದ ಪಾತ್ರವನ್ನು ವಿವರಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

57. ಸಾಮಾಜಿಕ ಬದಲಾವಣೆಯ ಪ್ರೇರಕಾಂಶಗಳು ಯಾವುವು ?